'ಹೌದು ಮತ್ತೆ ಇಲ್ಲಿಯಾದ್ರೂ ನಿನಗೆ ಯಾರಿದ್ದಾರೆ?'

'ಹೌದಪ್ಪ...' ದೇಸಾಯರ ಮಾತಿನಲ್ಲಿ ಖೇದವಿದ್ದು, 'ನಿನಗಾದರೆ ಇಬ್ಬರು ಗಂಡು ಮಕ್ಕಳು. ಪುಣಾದಲ್ಲಿ ಸುಧೀ ಇಲ್ಲಿ ಶ್ರೀಧರ ನಿನಗೆ ಆಸರೆಯಾಗಿ ಇದಾರೆ. ನಿನ್ನ ಅದೃಷ್ಟ ನನಗಿಲ್ಲವಲ್ಲ'

'ನನ್ನ ಅದೃಷ್ಟಕ್ಕೆ ಒಡುಕೋಬೇಕು.'

'ಯಾಕೋ ಹೀಗಂತೀ...' ದೇಸಾಯರಿಗೆ ಬೆರಗು.

'ಯಾರಲ್ಲಿ ಹೇಳಿಕೊಳ್ಳಲಿ ನನ್ನ ಸಂಕಟ. ಹೇಳಿಕೊಂಡರೆ ನನ್ನ ಮರ್ಯಾದೇನೇ ಸುಮಾರು.'

'ಅಂಥಾದ್ದೇನಾಗಿದೆ ಈಗ?'

'ಇಲ್ಲಿ ಶ್ರೀಧರಂದು ದಿನಾ ತಕರಾರು 'ನಾನೊಬ್ಬನೇ ನಿನಗೆ ಮಗಾನಾ?' ಎಂದು ದಿನವೂ ಕೆಣಕುತ್ತ ಇರುತ್ತಾನೆ. ಕೇಳಲಾಗದೆ ಸುಧೀ ಕಡೆ ಹೋದರೆ 'ನೀನೂ ಬೇಡ ನಿನ್ನ ಆಸ್ತೀನೂ ಬೇಡ. ಊರಲ್ಲೇ ಇರು' ಅಂತ ಅಟ್ಟುತ್ತಾನೆ. ಇಬ್ಬರ ಜಗಳದಲ್ಲಿ ನಾನೀಗ ಫುಟ್‌ಬಾಲ್ ಆಗಿಬಿಟ್ಟಿದೀನಿ ಈ ಸುಖ ಸುರಿದುಕೊಳ್ಳುವ ಮೊದಲೇ ನನ್ನ ಹೆಂಡತಿ ಸತ್ತು ಪುಣ್ಯ ಕಟ್ಟಿಕೊಂಡಳು.'

'ಓಹ್...' ದೇಸಾಯರು ಗೆಳೆಯನ ಸ್ಥಿತಿಗೆ ಮರುಗಿದರು.

'ಅದಕ್ಕೇ ಹೇಳೋದು' ಸುಬ್ಬಣ್ಣ ಮತ್ತೆ ಹೇಳತೊಡಗಿದ. 'ಈಗ ನಿಮಗೊಂದು ಸದವಕಾಶ ಅವನು ಕರೀತಿರೋದು ನಿನ್ನ ಪುಣ್ಯ ಅಂದುಕೋ. ಮಗ ಬಾ ಅಂತ ಕರೆದಾಗಲೇ ಅವನ ಹತ್ರ ಹೋಗಿದ್ದು ಬಿಡಬೇಕು. ಒಟ್ಟಿಗೇ ಇದ್ರೆ ನಿಮ್ಮ ಮೇಲೆ ಮಗ ಸೊಸೆಗೆ ಅಭಿಮಾನ ಬೆಳೆಯುತ್ತೆ. ಸಂಬಂಧ ಗಟ್ಟಿಯಾಗುತ್ತೆ. ಅದು ಬಿಟ್ಟು ಕೈಲಾಗದ ಕಾಲಕ್ಕೆ ನೋಡೋಣ ಎಂದೇನಾದ್ರೂ ನೀನು ಉಪೇಕ್ಷೆ ಮಾಡಿದೆಯೋ ನಮ್ಮ ಪಾಲಿಗೆ ಯಾರೂ ಇಲ್ಲ ಎಂಬ ಮನೋಭಾವ ಅವರಲ್ಲಿ ಬೆಳೆದು ಬಿಡುತ್ತೆ. ಅವರ ಹೊತ್ತಿಗೆ ನೀನು ಆಗದಿದ್ದ ಮೇಲೆ ನಿನ್ನ ಹೊತ್ತಿಗೆ ಅವರು ಆಗಬೇಕು ಅಂತ ಹೇಗೆ ನಿರೀಕ್ಷೆ ಮಾಡುತ್ತೀ? ಆಗ ಅವನು ನಿಮ್ಮಿಂದ ದೂರವಾಗೋದು ಖಂಡಿತ. ಆ ಮೇಲೇನು ಅವರವ ಹತ್ರ ನೀನು 'ಮಗ ಕೈಬಿಟ್ಟು ಬಿಟ್ಟ' ಅಂತ ಹಲುಬುತ್ತ ಇರಬೇಕು. ಆದರೂ ಆಗಲೂ ನಿನಗೆ ನೀನು ಮಾಡಿದ ತಪ್ಪು ಅರಿವಾಗೋದಿಲ್ಲ. ಅದೇ ದುರಂತ.'

**ಸುಬ್ಬಣ್ಣನ ಕತೆ ಕೇಳಿಯೇ ಅರ್ಧ ಮೈ ಬೆಚ್ಚಗಾಗಿತ್ತು. ಈಗ ಹೆಂಡತಿಯೂ ಅದೇ ಧಾಟಿಯಲ್ಲಿದ್ದಾಳೆ. ವಿನತಾಗೀಗ ಅಂತಃಕರಣ, ಆತ್ಮೀಯತೆ ತೋರಿಸೋರು ಬೇಕಾಗಿದ್ದಾರೆ. ಅವನ್ನು ಕೊಡಲು ನಿಮ್ಮಿಂದ ಸಾಧ್ಯವಿದೆ! ಎನ್ನುವ ಹೆಂಡತಿಯ ಮಾತಿನಲ್ಲಿ ತಥ್ಯವಿಲ್ಲದೆ ಇಲ್ಲ. ಇನ್ನೊಂದೆಂದರೆ ಈಗಂತೂ ಇವಳು ಮಗನ ಜೊತೆಗೆ ಹೊರಡಲು ತುದಿಗಾಲಲ್ಲಿ ನಿಂತುಬಿಟ್ಟಿದ್ದಾಳೆ.**

*****

ಮಧ್ಯಾಹ್ನ ಸಣ್ಣ ನಿದ್ದೆಯಲ್ಲಿದ್ದವರಿಗೆ ಭಾರೀ ಸಪ್ಪಳ ಕೇಳಿ ದೇಸಾಯರು ಗಡಬಡಿಸಿ ಎದ್ದರು. 'ಏನೇ, ಗುಡುಗಾ?' ಕೇಳಿದರು. ಅವಳು ಮಂದಹಾಸ ಬೀರಿ, 'ಸಿಡಿಲು, ಗುಡುಗು ಮಿಂಚು ಎಲ್ಲಾ ಒಟ್ಟಿಗೇ ಶುರುವಾಗಿದೆ. ಎದ್ದು ಹೊರಗೆ ಬನ್ನಿ. ಆಕಾಶದ ತುಂಬ ಕಪ್ಪು ಮೋಡಗಳು ತುಂಬಿ ಹೋಗಿವೆ. ಭಾರೀ ಮಳೆ ಸುರಿಯುವ ಸೂಚನೆ ಇದೆ' ಅಂದು ಕಾಫಿ ಕೈಗೆ ಕೊಟ್ಟಳು. 'ಹೌದಾ'